

**13** ‘ಶ್ರೀಕೃಷ್ಣ ಲೀಲಾತರಂಗಿಣಿ’ಯಲ್ಲಿ ಬರುವ ಹಾಡುಗಳನ್ನು ಭಗವಂತನಿಗೆ ಸಮರ್ಪಿಸಲಾಯಿತು. ನಂತರ ಹಠಾತ್ತನೆ, ಪರದೆಗಳು ಸರಿದವು. ದೀಪಗಳು ಭವ್ಯವಾಗಿ ಬೆಳಗಲಾರಂಭಿಸಿದವು. ಪರಮಸುಂದರನಾದ ಬಾಲಕೃಷ್ಣನ ದಿವ್ಯಮೂರ್ತಿ ಅಲ್ಲಿ ಕಾಣಿಸಿಕೊಂಡಿತು.




**14** ಗ್ರಾಮಸ್ಥರೆಲ್ಲರೂ ನಾರಾಯಣ ತೀರ್ಥರನ್ನು ಮೆರವಣಿಗೆಯಲ್ಲಿ ಕೊಂಡೊಯ್ದರು, ಗೌರವವನ್ನು ಸೂಚಿಸಿದರು. ನಾರಾಯಣ ತೀರ್ಥರು ಹಳ್ಳಿಯಿಂದ ಹಳ್ಳಿಗೆ ಹೋದರು. ಅಲ್ಲೆಲ್ಲ ಭಗವಂತನ ದಿವ್ಯನಾಮವನ್ನು ಪ್ರಸಾರ ಮಾಡಿದರು. ಇದಲ್ಲದೆ, ಅವರು ಅನೇಕ ಹಾಡುಗಳನ್ನು ರಚಿಸಿದರು, ಶಾಸ್ತ್ರಗಳಿಗೆ ವ್ಯಾಖ್ಯಾನವನ್ನು ಬರೆದರು. ಅವರ ಹೆಸರು ಎಲ್ಲೆಲ್ಲೂ ಜನಜನಿತವಾಯಿತು.




**15** ಭಗವಂತನ ಇಚ್ಛೆಯಂತೆ, ಅವರು ತಿರುಪ್ಪನ್‌ತೂರ್ತಿ ಎಂಬ ಹಳ್ಳಿಯಲ್ಲಿ ನೆಲೆಸಿದರು. ಅದು ಕಾವೇರಿ ನದಿಯ ದಂಡೆಯಲ್ಲಿದೆ. ಅಲ್ಲಿ ಒಂದು ಆಶ್ರಮವೂ ಸ್ಥಾಪನೆಯಾಯಿತು.

